# ಅಧ್ಯಾಯ-I: ಸಾಮಾನ್ಯ

## 1.1 ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ

2013–14ರ ಸಾಲಿನಲ್ಲಿ ಕರ್ನಾಟಕ ಸರ್ಕಾರವು ಸಂಗ್ರಹಿಸಿದ ತೆರಿಗೆ ಮತ್ತು ತೆರಿಗೆಯೇತರ ರಾಜಸ್ವ, ಪ್ರಸಕ್ತ ಸಾಲಿನಲ್ಲಿ ಕೇಂದ್ರದ ವಿಭಜನೀಯ ತೆರಿಗೆಗಳಲ್ಲಿನ ರಾಜ್ಯದ ಪಾಲು ಮತ್ತು ಭಾರತ ಸರ್ಕಾರದಿಂದ ಸ್ವೀಕರಿಸಲಾದ ಸಹಾಯಾನುದಾನಗಳು ಹಾಗೂ ತತ್ಸಂಬಂಧಿತ ಹಿಂದಿನ ನಾಲ್ಕು ವರ್ಷಗಳ ಅಂಕಿ–ಸಂಖ್ಯೆಗಳನ್ನು **ಕೋಷ್ಟಕ – 1.1.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.1.1**
**ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2009-10 | 2010-11 | 2011-12 | 2012-13 | 2013-14 |
|---|---|---|---|---|---|---|
| 1. | ರಾಜ್ಯ ಸರ್ಕಾರವು ಸಂಗ್ರಹಿಸಿದ ರಾಜಸ್ವ | | | | | |
| | • ತೆರಿಗೆ ರಾಜಸ್ವ | 30,578.60 | 38,473.12 | 46,475.96 | 53,753.55 | 62,603.53 |
| | • ತೆರಿಗೆಯೇತರ ರಾಜಸ್ವ | 3,333.80 | 3,358.29 | 4,086.86 | 3,966.11 | 4,031.90 |
| | ಒಟ್ಟು | **33,912.40** | **41,831.41** | **50,562.82** | **57,719.66** | **66,635.43** |
| 2. | ಭಾರತ ಸರ್ಕಾರದಿಂದ ಸ್ವೀಕೃತಿಗಳು | | | | | |
| | • ಕೇಂದ್ರದ ವಿಭಜನೀಯ ತೆರಿಗೆಗಳು ಮತ್ತು ಸುಂಕಗಳ ನಿವ್ವಳ ಸ್ವೀಕೃತಿಗಳ ಪಾಲು[1] | 7,359.98 | 9,506.32 | 11,075.04 | 12,647.14 | 13,808.28 |
| | • ಸಹಾಯಾನುದಾನ | 7,883.32 | 6,868.51 | 8,168.41 | 7,809.42 | 9,098.82 |
| | ಒಟ್ಟು | **15,243.30** | **16,374.83** | **19,243.45** | **20,456.56** | **22,907.10** |
| 3. | ರಾಜ್ಯ ಸರ್ಕಾರದ ಒಟ್ಟಾರೆ ರಾಜಸ್ವ ಸ್ವೀಕೃತಿಗಳು (1 ಮತ್ತು 2) | **49,155.70** | **58,206.23** | **69,806.27** | **78,176.22** | **89,542.53** |
| 4. | 3ಕ್ಕೆ ಹೋಲಿಸಿದಲ್ಲಿ ಕ್ರಮಸಂಖ್ಯೆ 1ರ ಶೇಕಡಾವಾರು : | **69** | **72** | **72** | **74** | **74** |

2013–14ರ ಸಾಲಿನಲ್ಲಿ ರಾಜ್ಯ ಸರ್ಕಾರವು ಗಳಿಸಿದ ರಾಜಸ್ವವು (₹ 66,635.43 ಕೋಟಿ) ಒಟ್ಟು ರಾಜಸ್ವ ಸ್ವೀಕೃತಿಗಳ ಶೇಕಡಾ 74ರಷ್ಟು ಆಗಿದ್ದಿತು ಎಂಬುದನ್ನು ಮೇಲ್ಕಂಡ ಕೋಷ್ಟಕವು ಸೂಚಿಸುತ್ತದೆ. 2013–14 ಸಾಲಿನಲ್ಲಿನ ಉಳಿದ ಶೇಕಡಾ 26ರಷ್ಟು ಸ್ವೀಕೃತಿಗಳು ಭಾರತ ಸರ್ಕಾರದಿಂದ ಪಡೆದಿರುವುದು.

**1.1.2** 2009–10ರಿಂದ 2013–14ರ ಅವಧಿಯಲ್ಲಿ ಸಂಗ್ರಹಿಸಿದ ತೆರಿಗೆ ರಾಜಸ್ವದ ವಿವರಗಳನ್ನು **ಕೋಷ್ಟಕ 1.1.2**ರಲ್ಲಿ ನೀಡಲಾಗಿದೆ:

[1] ಲೆಕ್ಕಪತ್ರಗಳ ಪ್ರಧಾನ ಶೀರ್ಷಿಕೆಗಳು 0020 ಸಂಸ್ಥೀಯ ತೆರಿಗೆ, 0021 – ಸಂಸ್ಥೀಯ ತೆರಿಗೆಯಲ್ಲದ ಆದಾಯದ ಮೇಲಿನ ತೆರಿಗೆಗಳು, 0032–ಐಶ್ವರ್ಯದ ಮೇಲಿನ ತೆರಿಗೆಗಳು, 0037–ಸೀಮಾ ಸುಂಕ, 0038–ಕೇಂದ್ರ ಅಬಕಾರಿ ಸುಂಕಗಳು, 0044–ಸೇವಾ ತೆರಿಗೆ ಮತ್ತು 2012–13ನೇ ಸಾಲಿಗೆ ಕರ್ನಾಟಕ ಸರ್ಕಾರದ ಹಣಕಾಸು ಲೆಕ್ಕಪತ್ರಗಳಲ್ಲಿ ದಾಖಲಿಸಲಾಗಿದ್ದಂತೆ ರಾಜ್ಯಗಳಿಗೆ ಹಂಚಿಕೆ ಮಾಡಲಾಗಿದ್ದ ನಿವ್ವಳ ಸ್ವೀಕೃತಿಗಳ ಪಾಲು, ಇವುಗಳ ಅಡಿಯಲ್ಲಿನ ಅಂಕಿಸಂಖ್ಯೆಗಳು.

**ಕೋಷ್ಟಕ 1.1.2**
**ತೆರಿಗೆ ರಾಜಸ್ವ ಸ್ವೀಕೃತಿಗಳ ವಿವರಗಳು**

**(₹ ಕೋಟಿಯಲ್ಲಿ)**

| ಕ್ರಮ ಸಂಖ್ಯೆ | ರಾಜಸ್ವ ಸ್ವೀಕೃತಿ | 2009-10 | | 2010-11 | | 2011-12 | | 2012-13 | | 2013-14 | | 2012-13 ಕ್ಕೆ ಹೋಲಿಸಿದಲ್ಲಿ 2013–14ರಲ್ಲಿ ಶೇಕಡಾವಾರು ಹೆಚ್ಚಳ (+) ಶೇಕಡಾವಾರು ಇಳಿಕೆ (–) | |
|---|---|---|---|---|---|---|---|---|---|---|---|---|---|
| | | ಆಯವ್ಯಯ ಅಂದಾಜು[2] | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯ ವ್ಯಯ ಅಂದಾಜು | ವಾಸ್ತವಿಕ |
| 1. | ಮಾರಾಟಗಳು, ವಾಣಿಜ್ಯ ಮುಂತಾದ ವುಗಳ ಮೇಲಿನ ತೆರಿಗೆಗಳು | 17,727.32 | 15,832.67 | 20,160.00 | 20,234.69 | 24,170.00 | 25,020.02 | 27,735.00 | 28,414.44 | 33,590.00 | 33,719.35 | 21.11 | 18.67 |
| 2. | ರಾಜ್ಯ ಅಬಕಾರಿ | 6,500.00 | 6,946.32 | 7,425.00 | 8,284.74 | 9,115.00 | 9,775.43 | 10,775.00 | 11,069.73 | 12,600.00 | 12,828.36 | 16.94 | 15.89 |
| 3. | ಮುದ್ರಾಂಕ ಶುಲ್ಕಗಳು | 3,566.62 | 2,627.57 | 3,500.00 | 3,531.08 | 4,030.00 | 4,623.20 | 5,200.00 | 5,225.02 | 6,500.00 | 6,188.76 | 25.00 | 18.44 |
| 4. | ಮೋಟಾರು ವಾಹನಗಳ ಮೇಲಿನ ತೆರಿಗೆಗಳು | 1,937.50 | 1,961.60 | 2,050.00 | 2,550.02 | 2,630.00 | 2,956.72 | 3,350.00 | 3,829.52 | 4,120.00 | 3,911.50 | 22.98 | 2.14 |
| 5. | ಇತರವುಗಳು | 6,496.87 | 3,210.44 | 3,093.31 | 3,872.59 | 3,872.09 | 4,100.59 | 4,760.69 | 5,214.84 | 5,653.99 | 5,955.56 | 18.76 | 14.20 |
| | **ಒಟ್ಟು** | **36,228.31** | **30,578.60** | **36,228.31** | **38,473.12** | **43,817.09** | **46,475.96** | **51,820.69** | **53,753.55** | **62,463.99** | **62,603.53** | **20.54** | **16.46** |

ಸಂಬಂಧಪಟ್ಟ ಇಲಾಖೆಗಳು, ವ್ಯತ್ಯಾಸಗಳಿಗೆ ಈ ಕೆಳಗಿನ ಕಾರಣಗಳನ್ನು ನೀಡಿದವು:

**ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆ:** ಇ–ಆಡಳಿತದ ಕಾರಣ ಉತ್ತಮ ಅನುಪಾಲನಾ ಕ್ರಮಗಳು

**ರಾಜ್ಯ ಅಬಕಾರಿ :** ಬಿಯರ್ ಮತ್ತು ಭಾರತೀಯ ಮದ್ಯ ಮಾರಾಟದಲ್ಲಿನ ಹೆಚ್ಚಳ ಹಾಗೂ ಹೆಚ್ಚುವರಿ ಅಬಕಾರಿ ಶುಲ್ಕ ದರಗಳನ್ನು ಹೆಚ್ಚಳಗೊಳಿಸಿದ್ದು.

**ಮುದ್ರಾಂಕ ಶುಲ್ಕ:** ಹಿಂದಿನ ಸಾಲಿಗೆ ಹೋಲಿಸಿದಂತೆ, ವರಮಾನದಲ್ಲಿನ ಹೆಚ್ಚಳವು ಮಾರ್ಗಸೂಚಿ ಮೌಲ್ಯವು ಶೇಕಡಾ 30ರಷ್ಟು ಹೆಚ್ಚಳಗೊಂಡಿದ್ದ ಕಾರಣದಿಂದ ಸಂಭವಿಸಿದ್ದಿತು. ಆದಾಗ್ಯೂ, ಇಲಾಖೆಯು ತಿಳಿಸಿರುವಂತೆ, 2013–14ರಲ್ಲಿ ರಾಜಸ್ವದ ವಾಸ್ತವಿಕ ಸಂಗ್ರಹಣೆಯು, ನೋಂದಣಿಗೊಂಡ ಮಾರಾಟ ಪತ್ರಗಳ ಸಂಖ್ಯೆಯು ಇಳಿಮುಖಗೊಂಡ ಕಾರಣ ಆಯವ್ಯಯ ಅಂದಾಜಿಗಿಂತ ಕಡಿಮೆಯಾಗಿದ್ದಿತು.

ಇತರೆ ಇಲಾಖೆಗಳಿಗೆ ಸಂಬಂಧಿಸಿದಂತೆ, ಕಾರಣಗಳನ್ನು ಕೋರಲಾಯಿತಾದರೂ (ಆಗಸ್ಟ್ 2014) ಹಿಂದಿನ ವರ್ಷಗಳಿಗೆ ಹೋಲಿಸಿದಂತೆ ಸ್ವೀಕೃತಿಗಳಲ್ಲಿನ ವ್ಯತ್ಯಾಸಗಳಿಗೆ ಕಾರಣಗಳನ್ನು ಒದಗಿಸಲಿಲ್ಲ (ಅಕ್ಟೋಬರ್ 2014).

**1.1.3** 2009–10ರಿಂದ 2013–14ರ ಅವಧಿಯಲ್ಲಿ ಸಂಗ್ರಹಿಸಲಾದ ಪ್ರಧಾನ ತೆರಿಗೆಯೇತರ ರಾಜಸ್ವದ ವಿವರಗಳನ್ನು **ಕೋಷ್ಟಕ 1.1.3ರಲ್ಲಿ ಸೂಚಿಸಲಾಗಿದೆ:**

**ಕೋಷ್ಟಕ 1.1.3 - ಸಂಗ್ರಹಿಸಲಾದ ತೆರಿಗೆಯೇತರ ಸ್ವೀಕೃತಿಗಳ ವಿವರಗಳು**

**(₹ ಕೋಟಿಯಲಿ)**

| ಕ್ರಮ ಸಂಖ್ಯೆ | ರಾಜಸ್ವದ ಶೀರ್ಷಿಕೆ | 2009-10 | | 2010-11 | | 2011-12 | | 2012-13 | | 2013-14 | | 2012-13 ಕ್ಕೆ ಹೋಲಿಸಿದಲ್ಲಿ 2013–14ರಲ್ಲಿ ಶೇಕಡಾವಾರು ಹೆಚ್ಚಳ (+)/ಇಳಿಕೆ (–) | |
|---|---|---|---|---|---|---|---|---|---|---|---|---|---|
| | | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ |
| 1 | ಕಬ್ಬಿಣೇತರ ಲೋಹ ಗಳ ಗಣಿಗಾರಿಕೆ ಮತ್ತು ಲೋಹ ಉದ್ಯಮ ಗಳು | 670.64 | 859.50 | 1,000.00 | 1,185.96 | 1,500.00 | 1,326.84 | 1,500.00 | 1,496.49 | 1,750.00 | 1,474.49 | 16.66 | (-) 1.47 |
| 2. | ಇತರೆ ತೆರಿಗೆಯೇತರ ಸ್ವೀಕೃತಿಗಳು | 1,458.87 | 2,474.30 | 1,819.90 | 2,172.33 | 2,174.79 | 2,760.02 | 1692.82 | 2469.62 | 2,288.28 | 2,557.41 | 35.17 | 3.55 |
| **ಒಟ್ಟು** | | **2,129.51** | **3,333.80** | **2,819.90** | **3,358.29** | **3,674.79** | **4,086.86** | **3,192.82** | **3,966.11** | **4,038.28** | **4,031.90** | **26.48** | **1.66** |

---

[2] ಆಯವ್ಯಯ ಅಂದಾಜುಗಳು

ಇಲಾಖೆಗಳನ್ನು ಕೋರಲಾಯಿತಾದರೂ (ಆಗಸ್ಟ್ 2014), ಹಿಂದಿನ ವರ್ಷಗಳಿಗೆ ಹೋಲಿಸಿದಂತೆ ಸ್ವೀಕೃತಿಗಳಲ್ಲಿನ ವ್ಯತ್ಯಾಸಗಳಿಗೆ ಕಾರಣಗಳನ್ನು ಒದಗಿಸಲಿಲ್ಲ (ಅಕ್ಟೋಬರ್ 2014).

## 1.2 ರಾಜಸ್ವ ಬಾಕಿಗಳ ವಿಶ್ಲೇಷಣೆ

ರಾಜಸ್ವದ ಕೆಲವು ಪ್ರಧಾನ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ 31 ಮಾರ್ಚ್ 2014ರಲ್ಲಿದ್ದಂತೆ ರಾಜಸ್ವ ಬಾಕಿಗಳು **ಕೋಷ್ಟಕ–1.2**ರಲ್ಲಿ ವಿವರಿಸಿರುವಂತೆ ₹ 4,945.97 ಕೋಟಿಯಷ್ಟಿದ್ದವು.

**ಕೋಷ್ಟಕ–1.2**
**ರಾಜಸ್ವದ ಬಾಕಿಗಳು**

**(₹ ಕೋಟಿಯಲ್ಲಿ )**

| ಕ್ರಮ ಸಂಖ್ಯೆ | ರಾಜಸ್ವ ಶೀರ್ಷಿಕೆಗಳು | 31 ಮಾರ್ಚ್ 2014ರಲ್ಲಿದ್ದಂತೆ ಬಾಕಿ ಇದ್ದಂತಹ ಒಟ್ಟು ಮೊತ್ತ | 31 ಮಾರ್ಚ್ 2014ರಲ್ಲಿದ್ದಂತೆ 5 ವರ್ಷಗಳಿಗೂ ಮೀರಿದಂತೆ ಬಾಕಿ ಇದ್ದಂತಹ ಮೊತ್ತ | ಇಲಾಖೆಯ ಉತ್ತರಗಳು |
|---|---|---|---|---|
| 1. | 0030 | 84.13 | ಮಾಹಿತಿಯನ್ನು ಒದಗಿಸಲಿಲ್ಲ | ಮಾಹಿತಿಯನ್ನು ಒದಗಿಸಲಿಲ್ಲ |
| 2. | 0040 | 4,861.84 | ಮಾಹಿತಿಯನ್ನು ಒದಗಿಸಲಿಲ್ಲ | ಒಟ್ಟಾರೆ ಬಾಕಿಗಳ ಪೈಕಿ, ₹ 649.16 ಕೋಟಿ ಮೊತ್ತವು ನ್ಯಾಯಾಲಯಗಳ ತಡೆಯಲ್ಲಿದೆ, ₹ 164.72 ಕೋಟಿ ಮೊತ್ತಕ್ಕೆ ಸಂಬಂಧಿಸಿದಂತೆ, ಬಿಐಎಫ್‌ಆರ್[3] ಮುಂದಿದೆ, ₹ 91.46 ಕೋಟಿ ಮೊತ್ತವು ಕಂದಾಯ ಇಲಾಖೆಯ ಮೂಲಕ ವಸೂಲಾತಿಯನ್ನು ವ್ಯಾಪಿಸಿದೆ, ₹ 200.28 ಕೋಟಿ ಮೊತ್ತಕ್ಕೆ ದಾಖಲೆಗಳಿಂದ ತೆಗೆದು ಹಾಕುವ ಪ್ರಸ್ತಾವನೆಗಳನ್ನು ಮಾಡಲಾಗಿದೆ ಹಾಗೂ ಪಾವತಿಗಳನ್ನು ಸ್ವೀಕರಿಸಲಾಗಿರುವ ₹ 266.79 ಕೋಟಿ ಮೊತ್ತವು ಪರಿಶೀಲನೆಯ ಅಡಿಯಲ್ಲಿದೆ. |
| | ಒಟ್ಟು | **4,945.97** | | |

ಸಂಬಂಧಿತ ಇಲಾಖೆಗಳು ರಾಜಸ್ವ ಬಾಕಿಗಳ ವರ್ಷವಾರು ವಿಂಗಡಣೆಯನ್ನು ಒದಗಿಸಲಿಲ್ಲ. ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ₹ 32.06 ಕೋಟಿ ಮೊತ್ತವು ಇಲಾಖಾ ಅಧಿಕಾರಿಗಳಲ್ಲಿ ಬಾಕಿ ಇದ್ದಿತು.

## 1.3 ತೆರಿಗೆ ಪಾವತಿಯಿಂದ ನುಣುಚಿಕೊಂಡಿದ್ದುದನ್ನು ಇಲಾಖೆಯು ಪತ್ತೆ ಹಚ್ಚಿದ್ದುದು

ವಾಣಿಜ್ಯ ತೆರಿಗೆಗಳ ಇಲಾಖೆಯು (ವಾತೆಇ) ಸಲ್ಲಿಸಿರುವ ವರದಿಯಂತೆ ವಾತೆಇಯು ಪತ್ತೆ ಹಚ್ಚಿದ್ದ ತೆರಿಗೆ ಪಾವತಿಯಿಂದ ನುಣುಚಿಕೊಳ್ಳಲ್ಪಟ್ಟಿದ್ದ ಪ್ರಕರಣಗಳು, ಅಂತಿಮ ರೂಪಕ್ಕೆ ತರಲಾದ ಪ್ರಕರಣಗಳು ಹಾಗೂ ಹೆಚ್ಚುವರಿ ತೆರಿಗೆಗಾಗಿ ಸೃಷ್ಟಿಸಲಾದ ತಗಾದೆಗಳ ವಿವರಗಳನ್ನು **ಕೋಷ್ಟಕ 1.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.3 - ತೆರಿಗೆ ಪಾವತಿಯಿಂದ ನುಣುಚಿಕೊಂಡಿದ್ದುದು**

**(₹ ಕೋಟಿಯಲ್ಲಿ )**

| ಕ್ರಮ ಸಂಖ್ಯೆ | ರಾಜಸ್ವದ ಶೀರ್ಷಿಕೆ | 31 ಮಾರ್ಚ್ 2013ರಲ್ಲಿ ಇದ್ದಂತೆ ಬಾಕಿ ಇದ್ದಂತಹ ಪ್ರಕರಣಗಳು | 2013–14ರಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳು | ಒಟ್ಟು | ಕರನಿರ್ಧಾರಣೆ/ವಿಚಾರಣೆ/ತನಿಖೆಯನ್ನು ಪೂರ್ಣಗೊಳಿಸಲಾದ ಹಾಗೂ ದಂಡ ಇತ್ಯಾದಿಗಳ ಜೊತೆಯಲ್ಲಿ ಹೆಚ್ಚುವರಿ ತಗಾದೆಯನ್ನು ಸೃಷ್ಟಿಸಲಾದ ಪ್ರಕರಣಗಳ ಸಂಖ್ಯೆ | | 31 ಮಾರ್ಚ್ 2014ರಲ್ಲಿದ್ದಂತೆ ಅಂತಿಮ ರೂಪಕ್ಕೆ ತರಲು ಬಾಕಿ ಇದ್ದಂತಹ ಪ್ರಕರಣಗಳ ಸಂಖ್ಯೆ |
|---|---|---|---|---|---|---|---|
| | | | | | ಪ್ರಕರಣಗಳ ಸಂಖ್ಯೆ | ತಗಾದೆಯ ಮೊತ್ತ | |
| **1.** | **0040**[4] | **421** | **1,850** | **2,271** | **1,764** | **83.23** | **409** |

ವರ್ಷದ ಪ್ರಾರಂಭದಲ್ಲಿ ಬಾಕಿ ಇದ್ದಂತಹ ಪ್ರಕರಣಗಳ ಸಂಖ್ಯೆಗೆ ಹೋಲಿಸಿದಲ್ಲಿ ವರ್ಷದ ಅಂತ್ಯದಲ್ಲಿ ಬಾಕಿ ಇದ್ದಂತಹ ಪ್ರಕರಣಗಳ ಸಂಖ್ಯೆಯು ಸ್ವಲ್ಪಮಟ್ಟಿಗೆ ಇಳಿಮುಖಗೊಂಡಿರುವುದನ್ನು ಮೇಲಿನ ಕೋಷ್ಟಕದಿಂದ

---

[3] ಕೈಗಾರಿಕಾ ಹಾಗೂ ವಿತ್ತೀಯ ಪುನರ್–ನಿರ್ಮಾಣಕ್ಕಾಗಿನ ಮಂಡಳಿ

[4] ಈ ಲೆಕ್ಕ ಶೀರ್ಷಿಕೆಗಾಗಿ ಸ್ವೀಕರಿಸಲಾದ ಮಾಹಿತಿಯು ರಾಜ್ಯದಲ್ಲಿನ ವಾಣಿಜ್ಯ ತೆರಿಗೆಗಳ ಇಲಾಖೆಯ 13 ವಿಭಾಗಗಳ ಪೈಕಿ ಕೇವಲ ಒಂದಕ್ಕೆ ಸಂಬಂಧಿಸಿದೆ. ಉಳಿದ 12 ವಿಭಾಗಗಳಿಂದ ಇನ್ನೂ ಸ್ವೀಕರಿಸಬೇಕಾಗಿದೆ (ಸೆಪ್ಟಂಬರ್ 2014).

ಕಾಣಬಹುದು.

ರಾಜ್ಯ ಅಬಕಾರಿ ಇಲಾಖೆ, ಕಂದಾಯ ಇಲಾಖೆ, ಸಾರಿಗೆ ಇಲಾಖೆ, ಇಂಧನ ಇಲಾಖೆ ಹಾಗೂ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ವಂಚನೆಗಳು ಹಾಗೂ ಪಾವತಿಗಳಿಂದ ನುಣುಚಿಕೊಂಡಿದ್ದಂತಹ ಯಾವುದಾದರೂ ಪ್ರಕರಣಗಳು ಇದ್ದಲ್ಲಿ, ಅವುಗಳ ವಿವರಗಳನ್ನು ಕೇಳಲಾಯಿತಾದರೂ (ಆಗಸ್ಟ್ 2014), ಅವುಗಳನ್ನು ಪಡೆದುಕೊಳ್ಳಲಾಗಿಲ್ಲ (ಅಕ್ಟೋಬರ್ 2014).

## 1.4 ಬಾಕಿ ಇರುವ ಮರುಪಾವತಿ ಪ್ರಕರಣಗಳು

ಇಲಾಖೆಗಳು ಸಲ್ಲಿಸಿರುವ ವರದಿಗಳಂತೆ, 2013–14 ಸಾಲಿನ ಪ್ರಾರಂಭದಲ್ಲಿದ್ದ ಮರುಪಾವತಿ ಪ್ರಕರಣಗಳ ಸಂಖ್ಯೆ, ಪ್ರಸಕ್ತ ಸಾಲಿನಲ್ಲಿ ಸ್ವೀಕರಿಸಲಾದ ಕೋರಿಕೆಗಳು, ಪ್ರಸಕ್ತ ಸಾಲಿನಲ್ಲಿ ಸಮ್ಮತಿಸಲಾದ ಮರುಪಾವತಿಗಳು ಹಾಗೂ 2013–14 ಸಾಲಿನ ಮುಕ್ತಾಯದ ಅವಧಿಯಲ್ಲಿ ಬಾಕಿ ಇದ್ದಂತಹ ಪ್ರಕರಣಗಳ ವಿವರಗಳನ್ನು **ಕೋಷ್ಟಕ 1.4**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.4**
**ಬಾಕಿ ಇರುವ ಮರುಪಾವತಿ ಪ್ರಕರಣಗಳ ವಿವರಗಳು**

| ಕ್ರಮ ಸಂಖ್ಯೆ | ವಿವರಗಳು | ಮಾರಾಟಗಳ ಮೇಲಿನ ತೆರಿಗೆ/ಮೌವತೆ | | ರಾಜ್ಯ ಅಬಕಾರಿ | |
|---|---|---|---|---|---|
| | | ಪ್ರಕರಣಗಳ ಸಂಖ್ಯೆ | ಮೊತ್ತ (₹ ಕೋಟಿಯಲ್ಲಿ) | ಪ್ರಕರಣಗಳ ಸಂಖ್ಯೆ | ಮೊತ್ತ (₹ ಕೋಟಿಯಲ್ಲಿ) |
| 1. | ವರ್ಷದ ಪ್ರಾರಂಭದಲ್ಲಿ ಬಾಕಿ ಇದ್ದಂತಹ ಕೋರಿಕೆಗಳು | 1,180 | 161.47 | 0 | 0 |
| 2. | ಪ್ರಸಕ್ತ ವರ್ಷದಲ್ಲಿ ಸ್ವೀಕರಿಸಲಾದ ಕೋರಿಕೆಗಳು | 2,181 | 629.40 | ಮಾಹಿತಿಯನ್ನು ಒದಗಿಸಲಿಲ್ಲ | 5.33 |
| 3. | ಪ್ರಸಕ್ತ ವರ್ಷದಲ್ಲಿ ಮಾಡಲಾದ ಮರುಪಾವತಿಗಳು | 2,379 | 688.87 | ಮಾಹಿತಿಯನ್ನು ಒದಗಿಸಲಿಲ್ಲ | 5.33 |
| 4. | ವರ್ಷದ ಅಂತ್ಯದಲ್ಲಿ ಬಾಕಿ ಇದ್ದಂತಹ ಪ್ರಕರಣಗಳು | 982 | 102.00 | 0 | 0 |

ಮಾರಾಟಗಳ ಮೇಲಿನ ತೆರಿಗೆ/ಮೌವತೆ ಮರುಪಾವತಿ ಪ್ರಕರಣಗಳ ವಿಲೇವಾರಿಯಲ್ಲಿನ ಪ್ರಗತಿಯು ವರ್ಷವು ಕಳೆದಂತೆ ಉತ್ತಮಗೊಂಡಿದೆ.

## 1.5 ಲೆಕ್ಕಪರಿಶೋಧನೆಗೆ ಸರ್ಕಾರ/ಇಲಾಖೆಗಳ ಪ್ರತಿಕ್ರಿಯೆ

ಪ್ರಧಾನ ಮಹಾಲೇಖಪಾಲರು (ಆರ್ಥಿಕ ಮತ್ತು ರಾಜಸ್ವ ಲೆಕ್ಕಪರಿಶೋಧನೆ), ಕರ್ನಾಟಕ, ಇವರು ಹಣಕಾಸು ವ್ಯವಹಾರಗಳ ಪರೀಕ್ಷಾ ಪರಿಶೀಲನೆ ಮಾಡುವುದಕ್ಕಾಗಿ ಹಾಗೂ ನಿಗಧಿತ ನಿಯಮಗಳು ಮತ್ತು ಕಾರ್ಯವಿಧಾನಗಳ ಪ್ರಕಾರ ಪ್ರಮುಖ ಲೆಕ್ಕಪತ್ರಗಳು ಹಾಗೂ ಇನ್ನಿತರ ದಾಖಲೆಗಳನ್ನು ಇಟ್ಟಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸರ್ಕಾರದ ಇಲಾಖೆಗಳನ್ನು ನಿಯತಕಾಲಿಕವಾಗಿ ಪರೀಕ್ಷಣೆ ಮಾಡುತ್ತಾರೆ. ಪರೀಕ್ಷಣೆಗಳ ಸಮಯದಲ್ಲಿ ಪತ್ತೆ ಹಚ್ಚಲಾದ ನಿಯಮ ಬಾಹಿರತೆಗಳನ್ನು ಅಳವಡಿಸಿಕೊಳ್ಳಲಾಗುವ ಪರೀಕ್ಷಣಾ ವರದಿಗಳ ಮೂಲಕ ಈ ಪರೀಕ್ಷಣೆಗಳನ್ನು ಅನುಸರಿಸಲಾಗುವುದು, ಪರೀಕ್ಷಣೆಯ ವೇಳೆಯಲ್ಲಿ ಕಂಡು ಬಂದ ಪ್ರಮುಖ ಲೋಪದೋಷಗಳನ್ನು ಸ್ಥಳದಲ್ಲಿಯೇ ಇತ್ಯರ್ಥಪಡಿಸಲು ಸಾಧ್ಯವಾಗದಿದ್ದಲ್ಲಿ, ಈ ಪರೀಕ್ಷಣಾ ವರದಿಗಳನ್ನು, ಪರೀಕ್ಷಣೆಗೆ ಒಳಪಟ್ಟ ಕಚೇರಿಗಳ ಮುಖ್ಯಸ್ಥರುಗಳಿಗೆ ನೀಡುವುದರ ಜೊತೆಗೆ, ಪ್ರತಿಯನ್ನು ತದನಂತರದ ಉನ್ನತ ಅಧಿಕಾರಿಗಳಿಗೆ ದೋಷಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಾಗಿ ಕಳುಹಿಸಿಕೊಡಲಾಗುವುದು. ಪ್ರಧಾನ ಮಹಾಲೇಖಪಾಲರಿಂದ ನೀಡಲ್ಪಟ್ಟ ಪರೀಕ್ಷಣಾ ವರದಿಗಳಲ್ಲಿ ಅಡಕವಾಗಿರುವ ಅಂಶಗಳಿಗೆ ಇಲಾಖೆಗಳ ಮುಖ್ಯಸ್ಥರು/ಸರ್ಕಾರವು ತ್ವರಿತವಾಗಿ ಸ್ಪಂದಿಸಿ, ತಪ್ಪುಗಳನ್ನು ಮತ್ತು ನ್ಯೂನತೆಗಳನ್ನು ಸರಿಪಡಿಸಿ, ಪರೀಕ್ಷಣಾ ವರದಿಗಳನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳ ಒಳಗೆ ಅನುಸರಣಾ ಕ್ರಮಗಳನ್ನು ತೆಗೆದುಕೊಂಡಿದ್ದರ ಬಗ್ಗೆ ಪ್ರಾಥಮಿಕ ಉತ್ತರದ ಮೂಲಕ ವರದಿಯನ್ನು ಪ್ರಧಾನ ಮಹಾಲೇಖಪಾಲರಿಗೆ ಕಳುಹಿಸುವುದು ಅತ್ಯಗತ್ಯವಾಗಿದೆ. ಗಂಭೀರ ಸ್ವರೂಪದ ಹಣಕಾಸಿನ ನಿಯಮಬಾಹಿರತೆಗಳನ್ನು ಇಲಾಖೆಗಳ ಮುಖ್ಯಸ್ಥರುಗಳು/ಸರ್ಕಾರದ ಗಮನಕ್ಕೆ ತರಲಾಗುವುದು.

4,114 ಪರೀಕ್ಷಣಾ ವರದಿಗಳಿಗೆ ಸಂಬಂಧಿಸಿದಂತೆ ₹ 1,851.83 ಕೋಟಿ ಮೊತ್ತವು ಒಳಗೊಂಡಂತೆ 8,753 ಕಂಡಿಕೆಗಳು ಜೂನ್ 2014ರ ಅಂತ್ಯದಲ್ಲಿ ಬಾಕಿ ಉಳಿದಿದ್ದವು ಎಂಬುದನ್ನು ಡಿಸೆಂಬರ್ 2013ರವರೆಗೆ ನೀಡಲಾಗಿದ್ದ ಪರೀಕ್ಷಣಾ ವರದಿಗಳು ತೋರಿಸಿಕೊಟ್ಟವು. ಹಿಂದಿನ ಎರಡು ಸಾಲುಗಳಿಗೆ ಅನುಗುಣವಾದ ಅಂಕಿಸಂಖ್ಯೆಗಳ ಜೊತೆಯಲ್ಲಿ ವಿವರಗಳನ್ನು **ಕೋಷ್ಟಕ 1.5**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5**
**ಬಾಕಿ ಇರುವ ಪರೀಕ್ಷಣಾ ವರದಿಗಳ ವಿವರಗಳು**

| | ಜೂನ್ 2012 | ಜೂನ್ 2013 | ಜೂನ್ 2014 |
|---|---|---|---|
| ಇತ್ಯರ್ಥಗೊಳ್ಳಲು ಬಾಕಿ ಇರುವ ಪರೀಕ್ಷಣಾ ವರದಿಗಳ ಸಂಖ್ಯೆ | 3,115 | 3,363 | 4,114[5] |
| ಬಾಕಿ ಇರುವ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳ ಸಂಖ್ಯೆ | 6,668 | 7,283 | 8,753 |
| ಒಳಗೊಂಡಿರುವ ರಾಜಸ್ವದ ಮೊತ್ತ (₹ಕೋಟಿಯಲ್ಲಿ) | 1,589.45 | 1,550.33 | 1,851.83 |

**1.5.1** 30 ಜೂನ್ 2014ರಲ್ಲಿದ್ದಂತೆ ಇಲಾಖಾವಾರು ಬಾಕಿ ಇರುವ ಪರೀಕ್ಷಣಾ ವರದಿಗಳು ಹಾಗೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು ಹಾಗೂ ಒಳಗೊಂಡಿರುವ ಮೊತ್ತಗಳ ವಿವರಗಳನ್ನು ಈ ಕೆಳಗಿನ **ಕೋಷ್ಟಕ 1.5.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5.1**
**ಪರೀಕ್ಷಣಾ ವರದಿಗಳ ಇಲಾಖಾವಾರು ವಿವರಗಳು**

| ಕ್ರಮ ಸಂಖ್ಯೆ | ಇಲಾಖೆಯ ಹೆಸರು | ಸ್ವೀಕೃತಿಗಳ ಸ್ವರೂಪ | ಬಾಕಿ ಇರುವ ಪರೀಕ್ಷಣಾ ವರದಿಗಳ ಸಂಖ್ಯೆ | ಬಾಕಿ ಇರುವ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳ ಸಂಖ್ಯೆ | ಒಳಗೊಂಡಿರುವ ಹಣಕಾಸಿನ ಮೌಲ್ಯ (₹ಕೋಟಿಯಲ್ಲಿ) |
|---|---|---|---|---|---|
| 1. | ಹಣಕಾಸು | ವಾಣಿಜ್ಯ ತೆರಿಗೆಗಳು | 1,870 | 4,518 | 429.43 |
| 2. | | ರಾಜ್ಯ ಅಬಕಾರಿ | 612 | 934 | 378.71 |
| 3. | ಕಂದಾಯ | ಭೂ ಕಂದಾಯ | 520 | 1,236 | 296.22 |
| 4. | | ಮುದ್ರಾಂಕಗಳು ಮತ್ತು ನೋಂದಣಿ ಶುಲ್ಕಗಳು | 606 | 1,089 | 342.22 |
| 5. | ಸಾರಿಗೆ | ಮೋಟಾರು ವಾಹನಗಳ ಮೇಲಿನ ತೆರಿಗೆಗಳು | 359 | 584 | 66.33 |
| 6. | ವಾಣಿಜ್ಯ ಮತ್ತು ಕೈಗಾರಿಕೆಗಳು | ಕಬ್ಬಿಣೇತರ ಲೋಹಗಳ ಗಣಿಗಾರಿಕೆ ಮತ್ತು ಲೋಹ ಉದ್ಯಮಗಳು | 142 | 382 | 334.51 |
| 7. | ಇಂಧನ | ವಿದ್ಯುಚ್ಛಕ್ತಿ ತೆರಿಗೆ | 5 | 10 | 4.41 |
| **ಒಟ್ಟು** | | | **4,114** | **8,753** | **1,851.83** |

2013–14ರಲ್ಲಿ ನೀಡಲಾದ 328 ಪರೀಕ್ಷಣಾ ವರದಿಗಳಿಗೆ ಸಂಬಂಧಿಸಿದಂತೆ, ಅವುಗಳನ್ನು ನೀಡಿದ ದಿನಾಂಕದಿಂದ ಒಂದು ತಿಂಗಳ ಒಳಗೆ ಕಚೇರಿಗಳ ಮುಖ್ಯಸ್ಥರುಗಳಿಂದ ಪ್ರಾಥಮಿಕ ಉತ್ತರಗಳನ್ನೂ ಸಹ ಲೆಕ್ಕಪರಿಶೋಧನೆಯು ಸ್ವೀಕರಿಸಿರುವುದಿಲ್ಲ. ಉತ್ತರಗಳನ್ನು ಸ್ವೀಕರಿಸದ ಕಾರಣ ಈ ಬೃಹತ್ ಪ್ರಮಾಣದಲ್ಲಿ ಬಾಕಿ ಇರುವ ಪರೀಕ್ಷಣಾ ವರದಿಗಳು ಕಚೇರಿಗಳ ಹಾಗೂ ಇಲಾಖೆಗಳ ಮುಖ್ಯಸ್ಥರುಗಳು ನ್ಯೂನತೆಗಳನ್ನು, ಲೋಪದೋಷಗಳನ್ನು ಹಾಗೂ ನಿಯಮ ಬಾಹಿರತೆಗಳನ್ನು ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳಲಿಲ್ಲ ಎಂಬುದನ್ನು ಸೂಚಿಸುತ್ತದೆ.

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳಿಗೆ ತ್ವರಿತ ಹಾಗೂ ಸೂಕ್ತ ಪ್ರತಿಕ್ರಿಯೆಯನ್ನು ನೀಡುವುದಕ್ಕಾಗಿ ಒಂದು ಪರಿಣಾಮಕಾರಿ ವ್ಯವಸ್ಥೆಯನ್ನು ಹೊಂದುವುದನ್ನು ಸರ್ಕಾರವು ಪರಿಗಣಿಸಬೇಕು.

## 1.5.2 ಇಲಾಖಾ ಲೆಕ್ಕಪರಿಶೋಧನಾ ಸಮಿತಿ ಸಭೆಗಳು

ಪರೀಕ್ಷಣಾ ವರದಿಗಳಲ್ಲಿ ಒಳಗೊಂಡಿರುವ ಲೆಕ್ಕಪರಿಶೋಧನಾ ಅಂಶಗಳನ್ನು ಇತ್ಯರ್ಥಪಡಿಸುವುದನ್ನು ತ್ವರಿತಗೊಳಿಸುವುದಕ್ಕಾಗಿ ಎಲ್ಲಾ ಇಲಾಖೆಗಳ ಸಚಿವಾಲಯದಲ್ಲಿ 'ತಾತ್ಪೂರ್ತಿಕ ಸಮಿತಿಗಳನ್ನು' ರಚಿಸುವಂತೆ ಸರ್ಕಾರವು ನಿರ್ದೇಶನಗಳನ್ನು ನೀಡಿತು (ಮಾರ್ಚ್ 1968). ಈ ಸಮಿತಿಗಳು ಸಂಬಂಧಿತ ಆಡಳಿತಾತ್ಮಕ ಇಲಾಖೆಗಳ ಕಾರ್ಯದರ್ಶಿಗಳ ನೇತೃತ್ವದಲ್ಲಿರಬೇಕು ಹಾಗೂ ರಾಜ್ಯ ಸರ್ಕಾರದ ನಾಮನಿರ್ದೇಶಿತ ಅಧಿಕಾರಿಗಳು ಹಾಗೂ ಪ್ರಧಾನ ಮಹಾಲೇಖಾಪಾಲರಿಂದ ನಾಮನಿರ್ದೇಶನಗೊಂಡ ಓರ್ವ ಅಧಿಕಾರಿಯು ಹಾಜರಿರಬೇಕು. ಈ ಸಮಿತಿಗಳು ನಿಯತಕಾಲಿಕವಾಗಿ ಹಾಗೂ ಕಡೆಯ ಪಕ್ಷ ಮೂರು ತಿಂಗಳಿಗೆ ಒಂದು ಸಲ ಸಭೆ ಸೇರಬೇಕು.

2013–14 ಸಾಲಿನಲ್ಲಿ ನಡೆಸಲಾದ ಇಲಾಖಾವಾರು ತಾತ್ಪೂರ್ತಿಕ ಸಮಿತಿ ಸಭೆಗಳು ಹಾಗೂ ಇತ್ಯರ್ಥಗೊಳಿಸಲಾದ ಕಂಡಿಕೆಗಳ ಸಂಖ್ಯೆಯು **ಕೋಷ್ಟಕ 1.5.2**ರಲ್ಲಿ ತೋರಿಸಿರುವಂತಿದ್ದವು:

[5] 1 ಜುಲೈ 2013ರಿಂದ ರಾಜಸ್ವ ವಲಯ ಲೆಕ್ಕಪರಿಶೋಧನೆಯ ಅಡಿಯಲ್ಲಿ ತರಲಾದ ಭೂ ಕಂದಾಯ ಕಚೇರಿಗಳನ್ನು ಒಳಗೊಂಡಿದೆ.

**ಕೋಷ್ಟಕ 1.5.2**
**ಇಲಾಖಾ ಲೆಕ್ಕಪರಿಶೋಧನಾ ಸಮಿತಿ ಸಭೆಗಳ ವಿವರಗಳು**

| ಇಲಾಖೆ | ನಡೆಸಲಾದ ಸಭೆಗಳ ಸಂಖ್ಯೆ | ಇತ್ಯರ್ಥಗೊಳಿಸಲಾದ ಕಂಡಿಕೆಗಳ ಸಂಖ್ಯೆ | ಹಣಕಾಸಿನ ಮೌಲ್ಯ (₹ ಕೋಟಿಯಲ್ಲಿ) |
|---|---|---|---|
| ವಾಣಿಜ್ಯ ತೆರಿಗೆಗಳು | 02 | 77 | 159.02 |
| ಮುದ್ರಾಂಕಗಳು ಮತ್ತು ನೋಂದಣಿ ಶುಲ್ಕ | 01 | 329 | 1633.58 |
| ಭೂ ಕಂದಾಯ | 02 | 66 | 829.98 |
| ರಾಜ್ಯ ಅಬಕಾರಿ | 08 | 50 | 171.11 |

ಬೃಹತ್ ಪ್ರಮಾಣದಲ್ಲಿ ಬಾಕಿ ಇರುವ ಪರೀಕ್ಷಣಾ ವರದಿಗಳು ಹಾಗೂ ಕಂಡಿಕೆಗಳಿಗೆ ಹೋಲಿಸಿದಲ್ಲಿ ನಡೆಸಲಾದ ಸಭೆಗಳು ಹಾಗೂ ಇತ್ಯರ್ಥಗೊಳಿಸಲಾದ ಕಂಡಿಕೆಗಳ ಸಂಖ್ಯೆಯು ಗೌಣವಾಗಿದ್ದಿತು. ರಾಜಸ್ವ ವಲಯ ಲೆಕ್ಕಪರಿಶೋಧನೆಯ ಅಡಿಯಲ್ಲಿನ ಮೂರು ಇಲಾಖೆಗಳು, ಅವೆಂದರೆ ಸಾರಿಗೆ ಇಲಾಖೆ, ಇಂಧನ ಇಲಾಖೆ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಗಳು ತಾತ್ಪೂರ್ತಿಕ ಸಮಿತಿ ಸಭೆಗಳನ್ನು ನಡೆಸಿರಲಿಲ್ಲ.

## 1.5.3 ಲೆಕ್ಕಪರಿಶೋಧನಾ ಪರಿಶೀಲನೆಗಾಗಿ ದಾಖಲೆಗಳನ್ನು ಒದಗಿಸದಿದ್ದುದು

ತೆರಿಗೆ ರಾಜಸ್ವ/ತೆರಿಗೆಯೇತರ ರಾಜಸ್ವ ಕಚೇರಿಗಳ ಸ್ಥಳೀಯ ಲೆಕ್ಕಪರಿಶೋಧನಾ ಕಾರ್ಯಕ್ರಮವನ್ನು ಸಾಕಷ್ಟು ಮುಂಚಿತವಾಗಿಯೇ ಯೋಜಿಸಲಾಗುವುದು ಹಾಗೂ ಲೆಕ್ಕಪರಿಶೋಧನೆಯ ಪರಿಶೀಲನೆಗೆ ಸಂಬಂಧಿತ ದಾಖಲೆಗಳನ್ನು ಸಿದ್ಧವಾಗಿಟ್ಟಿರುವುದನ್ನು ಸಾಧ್ಯಗೊಳಿಸುವುದಕ್ಕಾಗಿ, ಸಾಮಾನ್ಯವಾಗಿ ಲೆಕ್ಕಪರಿಶೋಧನೆಯನ್ನು ಪ್ರಾರಂಭಿಸುವುದಕ್ಕೆ ಒಂದು ತಿಂಗಳು ಮುಂಚಿತವಾಗಿಯೇ ತಿಳಿವಳಿಕೆ ಪತ್ರವನ್ನು ಇಲಾಖೆಗಳಿಗೆ ನೀಡಲಾಗುವುದು.

2013–14 ಸಾಲಿನಲ್ಲಿ 368ರಷ್ಟು ಸಂಖ್ಯೆಯ ಕಡತಗಳು, ಸಲ್ಲಿಕೆಗಳು, ಮರುಪಾವತಿಗಳು, ವಹಿಗಳು ಹಾಗೂ ಇನ್ನಿತರೆ ಸಂಬಂಧಿತ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲ. ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಇಲಾಖಾವಾರು ವಿಂಗಡಣೆಯನ್ನು **ಕೋಷ್ಟಕ 1.5.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.5.3**
**ಒದಗಿಸದೇ ಇದ್ದಂತಹ ದಾಖಲೆಗಳ ವಿವರಗಳು**

| ಕಚೇರಿ/ಇಲಾಖೆಯ ಹೆಸರು | ಲೆಕ್ಕಪರಿಶೋಧನೆ ಮಾಡಲಾಗದಿದ್ದಂತಹ ಪ್ರಕರಣಗಳ ಸಂಖ್ಯೆ |
|---|---|
| ಮಾರಾಟಗಳು, ವ್ಯಾಪಾರ, ಇತ್ಯಾದಿಗಳ ಮೇಲಿನ ತೆರಿಗೆಗಳು/ಮೌವತೆ | 316 |
| ರಾಜ್ಯ ಅಬಕಾರಿ | 2 |
| ಭೂ ಕಂದಾಯ | 38 |
| ಮೋಟಾರು ವಾಹನಗಳ ಮೇಲಿನ ತೆರಿಗೆ | 11 |
| ಗಣಿಗಳು ಮತ್ತು ಭೂವಿಜ್ಞಾನ | 1 |
| **ಒಟ್ಟು** | **368** |

## 1.5.4 ಲೆಕ್ಕಪರಿಶೋಧನಾ ಕರಡು ಕಂಡಿಕೆಗಳಿಗೆ ಇಲಾಖೆಗಳ ಪ್ರತಿಕ್ರಿಯೆ

ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸುವುದಕ್ಕಾಗಿ ಪ್ರಸ್ತಾವಿತ ಕರಡು ಕಂಡಿಕೆಗಳನ್ನು/ಸಮೀಕ್ಷೆಗಳನ್ನು ಪ್ರಧಾನ ಮಹಾಲೇಖಾಪಾಲರಿಂದ ಸಂಬಂಧಿತ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳಿಗೆ/ಕಾರ್ಯದರ್ಶಿಗಳಿಗೆ, ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಂತಹ ಅಂಶಗಳಿಗೆ ಅವರುಗಳ ಗಮನವನ್ನು ಸೆಳೆಯುವುದಕ್ಕಾಗಿ ಹಾಗೂ ತಮ್ಮ ಪ್ರತಿಕ್ರಿಯೆಯನ್ನು ಆರು ವಾರಗಳ ಒಳಗೆ ಕಳುಹಿಸುವಂತೆ ಕೋರಿ ಕಳುಹಿಸಲಾಗುತ್ತದೆ.

ಇಲಾಖೆಗಳು/ಸರ್ಕಾರದಿಂದ ಉತ್ತರಗಳು ಬಾರದಿರುವ ವಾಸ್ತವಾಂಶವನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲಾಗಿರುವ ಅಂತಹ ಕಂಡಿಕೆಗಳ ಕೊನೆಯಲ್ಲಿ ತಪ್ಪದೇ ಸೂಚಿಸಲಾಗುತ್ತದೆ.

ಜೂನ್ ಮತ್ತು ಆಗಸ್ಟ್ 2014ರ ನಡುವೆ 40 ಕರಡು ಕಂಡಿಕೆಗಳನ್ನು (ಎರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳೂ ಒಳಗೊಂಡಂತೆ) ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ ಅವರುಗಳ ಹೆಸರನ್ನು ಸಂಬೋಧಿಸುವ ಮೂಲಕ ಕಳುಹಿಸಿಕೊಡಲಾಗಿದ್ದಿತು.

ವಾಣಿಜ್ಯ ತೆರಿಗೆಗಳ ಇಲಾಖೆಗೆ ಸಂಬಂಧಿಸಿದ 14 ಕರಡು ಕಂಡಿಕೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಉತ್ತರಗಳನ್ನು ಸ್ವೀಕರಿಸಲಾಯಿತು (ಅಕ್ಟೋಬರ್ 2014) ಹಾಗೂ ಅವುಗಳನ್ನು ಈ ವರದಿಯನ್ನು ಅಂತಿಮ ರೂಪಕ್ಕೆ ತರುವ ವೇಳೆಯಲ್ಲಿ ಪರಿಗಣಿಸಲಾಯಿತು. ಆದಾಗ್ಯೂ, ಉಳಿದ 26 ಕರಡು ಕಂಡಿಕೆಗಳಿಗೆ ಸಂಬಂಧಿತ ಇಲಾಖೆಗಳಿಂದಾಗಲೀ ಅಥವಾ ಸರ್ಕಾರದಿಂದಾಗಲೀ ಉತ್ತರಗಳು ಬಂದಿರುವುದಿಲ್ಲ (ಅಕ್ಟೋಬರ್ 2014). ಸಂಬಂಧಿತ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳ ಜೊತೆಯಲ್ಲಿ ನಡೆಸಲಾದ ನಿರ್ಗಮನ ಸಭೆಯಲ್ಲಿ ಎರಡೂ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳನ್ನು ಚರ್ಚಿಸಲಾಯಿತು ಹಾಗೂ ಸರ್ಕಾರ/ಇಲಾಖೆಯ ಅಭಿಪ್ರಾಯವನ್ನು ಸೂಕ್ತವಾಗಿ ಅಳವಡಿಸಿಕೊಳ್ಳಲಾಯಿತು.

## 1.5.5 ಲೆಕ್ಕಪರಿಶೋಧನಾ ವರದಿಗಳಿಗೆ ಅನುಸರಣಾ ಕ್ರಮಗಳು – ಸಂಕ್ಷಿಪ್ತ ಸ್ಥಿತಿಗತಿ

ಸಾರ್ವಜನಿಕ ಲೆಕ್ಕಪತ್ರ ಸಮಿತಿಯ (ಪಿ.ಎ.ಸಿ) ನಿಯಮಗಳು ಮತ್ತು ಕಾರ್ಯವಿಧಾನದ (ಆಂತರಿಕ ಕಾರ್ಯವಿಧಾನ) ಪ್ರಕಾರ ಲೆಕ್ಕಪರಿಶೋಧನಾ ವರದಿಯೊಂದನ್ನು ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟ ನಾಲ್ಕು ತಿಂಗಳುಗಳೊಳಗೆ ಸರ್ಕಾರದ ಇಲಾಖೆಗಳು ಲೆಕ್ಕಪರಿಶೋಧನಾ ಕಂಡಿಕೆಗಳ ಮೇಲೆ ಸವಿವರ ವಿವರಣೆಗಳನ್ನು (ಇಲಾಖಾ ಟಿಪ್ಪಣಿಗಳು) ಕರ್ನಾಟಕ ವಿಧಾನಸಭಾ ಸಚಿವಾಲಯಕ್ಕೆ ಸಲ್ಲಿಸಬೇಕು. ಆರೀತಿ ಸಲ್ಲಿಸುವ ಮೊದಲು ಅಂತಹ ಇಲಾಖಾ ಟಿಪ್ಪಣಿಗಳನ್ನು ಪ್ರಧಾನ ಮಹಾಲೇಖಪಾಲರ ಪರಿಶೀಲನೆಗೆ ಒಳಪಡಿಸಬೇಕೆಂಬುದನ್ನೂ ಸಹ ನಿಯಮಗಳು ಅಪೇಕ್ಷಿಸುತ್ತವೆ.

31 ಮಾರ್ಚ್ 2009, 2010, 2011, 2012 ಮತ್ತು 2013 ಸಾಲುಗಳ ಅಂತ್ಯಕ್ಕೆ ಕರ್ನಾಟಕ ಸರ್ಕಾರದ ರಾಜಸ್ವ ವಲಯದ ಮೇಲೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳಲ್ಲಿ ಸೇರಿಸಲಾಗಿದ್ದ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಹಾಗೂ ಗಣಿಗಳು ಮತ್ತು ಭೂವಿಜ್ಞಾನ ಇಲಾಖೆಗೆ ಸಂಬಂಧಿಸಿದ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯೂ ಸೇರಿದಂತೆ 175 ಕಂಡಿಕೆಗಳನ್ನು ರಾಜ್ಯ ಶಾಸನ ಸಭೆಯ ಮುಂದೆ ಮಾರ್ಚ್ 2010 ಮತ್ತು ಫೆಬ್ರವರಿ 2014ರ ನಡುವಿನ ಅವಧಿಯಲ್ಲಿ ಮಂಡಿಸಲಾಗಿದ್ದಿತು.

ಸೆಪ್ಟಂಬರ್ 2014ರಲ್ಲಿದ್ದಂತೆ, ಈ ಕಂಡಿಕೆಗಳ ಪೈಕಿ 93ಕ್ಕೆ ಇಲಾಖಾ ಟಿಪ್ಪಣಿಗಳನ್ನು ಸಂಬಂಧಿತ ಇಲಾಖೆಗಳಿಂದ 13 ತಿಂಗಳುಗಳ ಸರಾಸರಿ ವಿಳಂಬದೊಂದಿಗೆ ಸ್ವೀಕರಿಸಲಾಯಿತು. 31 ಮಾರ್ಚ್ 2011ಕ್ಕೆ ಅಂತ್ಯಗೊಂಡ ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಹೊರತುಪಡಿಸಿದಂತೆ, ಉಳಿದ 82 ಕಂಡಿಕೆಗಳಿಗೆ 7 ಇಲಾಖೆಗಳಿಂದ (ವಾಣಿಜ್ಯ ತೆರಿಗೆಗಳು, ಭೂ ಕಂದಾಯ, ಮುದ್ರಾಂಕಗಳು ಮತ್ತು ನೋಂದಣಿ, ರಾಜ್ಯ ಅಬಕಾರಿ, ಸಾರಿಗೆ, ಗಣಿಗಳು ಮತ್ತು ಭೂವಿಜ್ಞಾನ, ಮುಖ್ಯ ವಿದ್ಯುತ್ ಪರೀಕ್ಷಾಧಿಕಾರಿಯವರ ಕಚೇರಿ) ಇಲಾಖಾ ಟಿಪ್ಪಣಿಗಳು ಸ್ವೀಕೃತಗೊಂಡಿಲ್ಲ.

ಲೆಕ್ಕಪರಿಶೋಧನಾ ವರದಿಗಳಲ್ಲಿ ಎತ್ತಿತೋರಿಸಲಾಗಿರುವ ಹಾಗೂ ವಸೂಲಾತಿಯಾಗದೇ ಉಳಿದಿರುವ ರಾಜಸ್ವ ಸಂಗ್ರಹಣೆಗೆ ಸಹಾಯಕವೂ ಆಗಿರುವ ಪ್ರಮುಖ ಅಂಶಗಳನ್ನು ಅನುಸರಿಸಲು ಕಾರ್ಯಾಂಗವು ಪರಿಣಾಮಕಾರಿತ್ವದಿಂದ ಕೂಡಿದ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ ಎಂಬುದನ್ನು ಇದು ಸೂಚಿಸುತ್ತದೆ.

## 1.6 ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳ ಜೊತೆ ವ್ಯವಹರಿಸುವುದಕ್ಕಾಗಿನ ವ್ಯವಸ್ಥೆಯ ವಿಶ್ಲೇಷಣೆ

ಪರೀಕ್ಷಣಾ ವರದಿಗಳು/ಲೆಕ್ಕಪರಿಶೋಧನಾ ವರದಿಗಳಲ್ಲಿ ಎತ್ತಿ ತೋರಿಸಲಾಗಿರುವ ಅಂಶಗಳಿಗೆ ಅನುಸರಣಾ ಕ್ರಮಗಳನ್ನು ಕೈಗೊಳ್ಳುವ ವ್ಯವಸ್ಥೆಯನ್ನು ವಿಶ್ಲೇಷಿಸುವುದಕ್ಕಾಗಿ ಒಂದು ಇಲಾಖೆಗೆ ಸಂಬಂಧಿಸಿದಂತೆ ಕಳೆದ 10 ವರ್ಷಗಳಲ್ಲಿ ನೀಡಲಾದ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿದ್ದ ಕಂಡಿಕೆಗಳು ಮತ್ತು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳ ಮೇಲೆ ತೆಗೆದುಕೊಳ್ಳಲಾದ ಕ್ರಮಗಳನ್ನು ಮೌಲ್ಯಮಾಪನ ಮಾಡಲಾಯಿತು ಹಾಗೂ ಈ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲಾಯಿತು.

ಮುಂದಿನ 1.6.1 ಮತ್ತು 1.6.2 ಕಂಡಿಕೆಗಳು ಕಳೆದ ಹತ್ತು ವರ್ಷಗಳಲ್ಲಿ ಸ್ಥಳೀಯ ಲೆಕ್ಕಪರಿಶೋಧನೆಯ ಸಮಯದಲ್ಲಿ ಪತ್ತೆ ಹಚ್ಚಲಾಗಿದ್ದ ಪ್ರಕರಣಗಳು ಹಾಗೂ ಅಲ್ಲದೇ 2003–04ರಿಂದ 2012–13 ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲ್ಪಟ್ಟಿದ್ದ ಪ್ರಕರಣಗಳಿಗೆ ಸಂಬಂಧಿಸಿದಂತೆ ವಾಣಿಜ್ಯ ತೆರಿಗೆಗಳ ಇಲಾಖೆಯ[6] ಕಾರ್ಯನಿರ್ವಹಣೆಯನ್ನು ಚರ್ಚಿಸುತ್ತವೆ.

### 1.6.1 ಪರೀಕ್ಷಣಾ ವರದಿಗಳ ಸ್ಥಿತಿಗತಿ

ಕಳೆದ 10 ವರ್ಷಗಳಲ್ಲಿ ನೀಡಲಾದ ಪರೀಕ್ಷಣಾ ವರದಿಗಳು, ಈ ವರದಿಗಳಲ್ಲಿ ಸೇರಿಸಲ್ಪಟ್ಟಿರುವ ಕಂಡಿಕೆಗಳು ಹಾಗೂ ಅವುಗಳ 31 ಮಾರ್ಚ್ 2014ರಲ್ಲಿದ್ದ ಸ್ಥಿತಿಗತಿಯ ಒಂದು ಸಂಕ್ಷಿಪ್ತ ಚಿತ್ರಣವನ್ನು ಕೆಳಗಿನ **ಕೋಷ್ಟಕ 1.6.1**ರಲ್ಲಿ ಅಂಕಣಪಟ್ಟಿ ಮಾಡಲಾಗಿದೆ.

---

6 ರಾಜಸ್ವ ಶೀರ್ಷಿಕೆಗಳು 028, 040ರ ಅಡಿಯಲ್ಲಿ

**ಕೋಷ್ಟಕ 1.6.1**

**ಪರೀಕ್ಷಣಾ ವರದಿಗಳ ಸ್ಥಿತಿಗತಿಗಳು**

**( ₹ ಕೋಟಿಯಲ್ಲಿ )**

| ಕ್ರಮ ಸಂಖ್ಯೆ | ವರ್ಷ | ಪ್ರಾರಂಭಿಕ ಶಿಲ್ಕು | | | ಪ್ರಸಕ್ತ ಸಾಲಿನಲ್ಲಿ ಸೇರ್ಪಡೆಗೊಂಡಿದ್ದು | | | ಪ್ರಸಕ್ತ ಸಾಲಿನಲ್ಲಿ ವಿಲೆವಾರಿಗೊಂಡಿದ್ದು | | | ಅಂತಿಮ ಶಿಲ್ಕು | | |
|---|---|---|---|---|---|---|---|---|---|---|---|---|---|
| | | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸಿನ ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸಿನ ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸಿನ ಮೌಲ್ಯ | ಪರೀಕ್ಷಣಾ ವರದಿಗಳು | ಕಂಡಿಕೆಗಳು | ಹಣಕಾಸಿನ ಮೌಲ್ಯ |
| 1. | 2004-05 | 2,485 | 5,301 | 135.21 | 493 | 1,320 | 49.59 | 369 | 1,185 | 28.43 | 2,609 | 5,436 | 156.37 |
| 2. | 2005-06 | 2,609 | 5,436 | 156.37 | 127 | 664 | 49.80 | 1,103 | 2,082 | 61.44 | 1,633 | 4,018 | 144.73 |
| 3. | 2006-07 | 1,633 | 4,018 | 144.73 | 296 | 1,396 | 124.62 | 252 | 1,108 | 39.59 | 1,677 | 4,306 | 229.77 |
| 4. | 2007-08 | 1,677 | 4,306 | 229.77 | 213 | 1,159 | 122.63 | 651 | 1,791 | 86.18 | 1,239 | 3,674 | 266.22 |
| 5. | 2008-09 | 1,239 | 3,674 | 266.22 | 218 | 921 | 230.50 | 78 | 838 | 70.58 | 1,379 | 3,757 | 426.13 |
| 6. | 2009-10 | 1,379 | 3,757 | 426.13 | 103 | 579 | 103.68 | 36 | 355 | 108.34 | 1,446 | 3,981 | 421.48 |
| 7. | 2010-11 | 1,446 | 3,981 | 421.48 | 71 | 459 | 81.56 | 63 | 476 | 47.22 | 1,454 | 3,964 | 455.82 |
| 8. | 2011-12 | 1,454 | 3,964 | 455.82 | 121 | 528 | 82.52 | 8 | 211 | 26.03 | 1,567 | 4,281 | 512.31 |
| 9. | 2012-13 | 1,567 | 4,281 | 512.31 | 237 | 764 | 70.25 | 72 | 443 | 99.87 | 1,732 | 4,602 | 482.69 |
| 10. | 2013-14 | 1,732 | 4,602 | 482.69 | 205 | 632 | 72.06 | 21 | 391 | 58.32 | 1,916 | 4,843 | 496.43 |

## 1.6.2 ಒಪ್ಪಿಕೊಳ್ಳಲಾದ ಪ್ರಕರಣಗಳಲ್ಲಿ ವಸೂಲಾತಿ

ಕಳೆದ 10 ವರ್ಷಗಳಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರ್ಪಡೆಗೊಂಡಿದ್ದ ಕಂಡಿಕೆಗಳು, ಅವುಗಳ ಪೈಕಿ ಇಲಾಖೆಯು ಒಪ್ಪಿಕೊಂಡಿದ್ದವುಗಳು ಹಾಗೂ ವಸೂಲಾತಿ ಮಾಡಲಾದ ಮೊತ್ತ, ಇವುಗಳನ್ನು **ಕೋಷ್ಟಕ 1.6.2**ರಲ್ಲಿ ನಮೂದಿಸಲಾಗಿದೆ:

**ಕೋಷ್ಟಕ 1.6.2**

**( ₹ ಕೋಟಿಯಲ್ಲಿ)**

| ಲೆಕ್ಕ ಪರಿಶೋಧನಾ ವರದಿಯು ಸಂಬಂಧಿಸಿದ್ದ ವರ್ಷ | ಸೇರ್ಪಡೆ ಗೊಂಡಿದ್ದ ಕಂಡಿಕೆಗಳ ಸಂಖ್ಯೆ | ಕಂಡಿಕೆಗಳ ಹಣಕಾಸಿನ ಮೌಲ್ಯ | ಹಣಕಾಸಿನ ಮೌಲ್ಯವು ಒಳಗೊಂಡಂತೆ ಒಪ್ಪಿಕೊಳ್ಳಲಾಗಿದ್ದ ಕಂಡಿಕೆಗಳ ಸಂಖ್ಯೆ | ಒಪ್ಪಿಕೊಳ್ಳ ಲಾಗಿದ್ದ ಕಂಡಿಕೆಗಳ ಹಣಕಾಸಿನ ಮೌಲ್ಯ | 2013–14 ರಲ್ಲಿ ವಸೂಲಾತಿ ಮಾಡಲಾದ ಮೊತ್ತ | 31–03–2014 ರಲ್ಲಿದ್ದಂತೆ ಒಪ್ಪಿಕೊಳ್ಳಲಾದ ಪ್ರಕರಣಗಳಲ್ಲಿ ವಸೂಲಾತಿಯ ಸಂಚಿತ ಸ್ಥಿತಿಗತಿ |
|---|---|---|---|---|---|---|
| 2003-04 | 9 | 13.43 | 9 | 8.61 | 0 | 5.50 |
| 2004-05 | 11 | 8.01 | 7 | 0.76 | 0 | 0.55 |
| 2005-06 | 15 | 27.83 | 14 | 19.88 | 0 | 4.23 |
| 2006-07 | 20 | 75.59 | 16 | 11.67 | 0 | 2.32 |
| 2007-08 | 20 | 78.28 | 15 | 25.99 | 0 | 8.15 |
| 2008-09 | 11 | 8.01 | 8 | 3.73 | 0 | 2.81 |
| 2009-10 | 9 | 15.29 | 9 | 10.79 | 1.58 | 2.90 |
| 2010-11 | 10 | 79.26 | 6 | 0.90 | 0.37 | 0.80 |
| 2011-12 | 9 | 82.12 | 6 | 15.76 | 0.07 | 0.34 |
| 2012-13 | 14 | 155.51 | 9 | 2.45 | 0 | 2.31 |

ಒಪ್ಪಿಕೊಳ್ಳಲಾದ ಪ್ರಕರಣಗಳಲ್ಲಿಯೂ ಸಹ ವಸೂಲಾತಿಯ ಪ್ರಗತಿಯು ಕಳೆದ ಹತ್ತು ವರ್ಷಗಳಲ್ಲಿ ಬಹಳಷ್ಟು ಮಂದಗತಿಯಲ್ಲಿದ್ದಿತು ಎಂಬುದು ಮೇಲಿನ ಕೋಷ್ಟಕದಿಂದ ಸ್ಪಷ್ಟವಾಗುತ್ತದೆ.

ಒಪ್ಪಿಕೊಳ್ಳಲಾದ ಪ್ರಕರಣಗಳಲ್ಲಿ ಒಳಗೊಂಡಿರುವ ಬಾಕಿಗಳ ವಸೂಲಾತಿಯ ತ್ವರಿತ ಕ್ರಮವನ್ನು ಅನುಸರಿಸಲು ಹಾಗೂ ಮೇಲ್ವಿಚಾರಣೆ ಮಾಡಲು ಇಲಾಖೆಯು ತತ್‌ಕ್ಷಣದ ಕ್ರಮವನ್ನು ತೆಗೆದುಕೊಳ್ಳಬೇಕು.

## 1.7 ಲೆಕ್ಕಪರಿಶೋಧನೆಯ ಪೂರ್ವಭಾವಿ ಯೋಜನೆ

ವಿವಿಧ ಇಲಾಖೆಗಳ ಘಟಕ ಕಚೇರಿಗಳನ್ನು, ಅವುಗಳ ರಾಜಸ್ವದ ಸ್ಥಿತಿಗತಿ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳ ಹಿಂದಿನ ಪ್ರವೃತ್ತಿ ಮತ್ತು ಇನ್ನಿತರೆ ಪ್ರಮಿತಿಗಳಿಗೆ ತಕ್ಕಂತೆ ಅಧಿಕ, ಮಧ್ಯಮ ಹಾಗೂ ಅಲ್ಪ ಪ್ರಮಾಣದ ಸಂಭಾವ್ಯ ಅಪಾಯಗಳುಳ್ಳ ಸಂಸ್ಥೆಗಳೆಂಬುದಾಗಿ ವಿಂಗಡಿಸಲಾಗುವುದುವಾರ್ಷಿಕ ಲೆಕ್ಕಪರಿಶೋಧನಾ ಪೂರ್ವಭಾವಿ ಯೋಜನೆಯು ಸಂಭಾವ್ಯ ಅಪಾಯದ ಚಿಂತನೆಯನ್ನು ಆಧರಿಸಿದ್ದು, ಅದು ಇನ್ನಿತರವುಗಳೊಂದಿಗೆ ಸರ್ಕಾರದ ರಾಜಸ್ವ ಮತ್ತು ತೆರಿಗೆ ಆಡಳಿತದಲ್ಲಿ ಪ್ರಮುಖ ವಿಚಾರಗಳು ಅಂದರೆ

ಆಯವ್ಯಯ ಭಾಷಣ, ರಾಜ್ಯ ಆರ್ಥಿಕ ಸ್ಥಿತಿಗತಿಯ ಮೇಲಿನ ಶ್ವೇತಪತ್ರ, ಹಣಕಾಸು ಆಯೋಗದ (ರಾಜ್ಯ ಮತ್ತು ಕೇಂದ್ರ) ವರದಿಗಳು, ತೆರಿಗೆ ಸುಧಾರಣಾ ಆಯೋಗದ ಶಿಫಾರಸ್ಸುಗಳು, ಕಳೆದ ಐದು ವರ್ಷಗಳಲ್ಲಿನ ಕಂದಾಯ ಗಳಿಕೆಯ ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ, ತೆರಿಗೆ ನಿರ್ವಹಣೆಯ ವೈಶಿಷ್ಟ್ಯಗಳು, ಲೆಕ್ಕಪರಿಶೋಧನಾ ವ್ಯಾಪ್ತಿ ಹಾಗೂ ಕಳೆದ ಐದು ವರ್ಷಗಳಲ್ಲಿ ಅದರ ಪ್ರಭಾವ, ಇತ್ಯಾದಿಗಳನ್ನು ಒಳಗೊಂಡಿದೆ.

2013–14 ಸಾಲಿನಲ್ಲಿ, ಲೆಕ್ಕಪರಿಶೋಧನೆ ಮಾಡಬೇಕಾದ 551 ಘಟಕಗಳಿದ್ದವು, ಅವುಗಳ ಪೈಕಿ 426 ಘಟಕಗಳಿಗೆ ಪೂರ್ವಭಾವಿ ಯೋಜನೆ ಮಾಡಲಾಯಿತು ಹಾಗೂ 439 ಘಟಕಗಳನ್ನು ಲೆಕ್ಕಪರಿಶೋಧನೆ ಮಾಡಲಾಯಿತು ಅದು ಶೇಕಡಾ 79.67ರಷ್ಟಾಗಿತ್ತು. ವಿವರಗಳನ್ನು ಈ ಕೆಳಗಿನ **ಕೋಷ್ಟಕ 1.7.1**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 1.7.1**
**ಲೆಕ್ಕಪರಿಶೋಧನೆ ಮಾಡಲಾದ ಘಟಕಗಳ ವಿವರಗಳು**

| ಇಲಾಖೆ | ಘಟಕಗಳ ಸಂಖ್ಯೆ | | |
|---|---|---|---|
| | 2013–14 ಸಾಲಿನಲ್ಲಿ ಲೆಕ್ಕಪರಿಶೋಧನೆ ಮಾಡಬೇಕಾಗಿದ್ದವುಗಳು | 2013–14 ಸಾಲಿನಲ್ಲಿ ಲೆಕ್ಕಪರಿಶೋಧನೆಗಾಗಿ ಪೂರ್ವಯೋಜಿಸಲಾದ ಘಟಕಗಳು/ಕಚೇರಿಗಳು | 2013–14ರಲ್ಲಿ ಲೆಕ್ಕಪರಿಶೋಧನೆ ಮಾಡಲ್ಪಟ್ಟ ಘಟಕಗಳು/ಕಚೇರಿಗಳು |
| ವಾಣಿಜ್ಯ ತೆರಿಗೆಗಳು | 195 | 168 | 181 |
| ಮುದ್ರಾಂಕ ಮತ್ತು ನೋಂದಣಿ ಶುಲ್ಕ | 145 | 132 | 132 |
| ಮೋಟಾರು ವಾಹನಗಳ ಮೇಲಿನ ತೆರಿಗೆಗಳು | 54 | 51 | 51 |
| ಭೂ ಕಂದಾಯ | 89 | 42 | 42 |
| ರಾಜ್ಯ ಅಬಕಾರಿ | 40 | 18 | 18 |
| ಖನಿಜ ಸ್ವೀಕೃತಿಗಳು | 17 | 14 | 14 |
| ಮುಖ್ಯ ವಿದ್ಯುಚ್ಛಕ್ತಿ ಪರೀಕ್ಷಣಾಧಿಕಾರಿಯವರ ಕಾರ್ಯಾಲಯ | 11 | 1 | 1 |
| **ಒಟ್ಟು** | **551** | **426** | **439** |

ಮೇಲೆ ತಿಳಿಸಲಾದ ಅನುಪಾಲನಾ ಲೆಕ್ಕಪರಿಶೋಧನೆಯಲ್ಲದೇ, ಪ್ರಸಕ್ತ ಸಾಲಿನಲ್ಲಿ, ಎರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳನ್ನೂ ಕೈಗೆತ್ತಿಕೊಳ್ಳಲಾಯಿತು. ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಕಾಮಗಾರಿಗಳ ಗುತ್ತಿಗೆ ಸ್ವೀಕೃತಿಗಳ ಮೇಲೆ ತೆರಿಗೆ ನಿರ್ವಹಣೆಯ ಪರಿಣಾಮಕಾರಿತ್ವವನ್ನು ಪರಿಶೀಲಿಸುವುದಕ್ಕಾಗಿ ಹಾಗೂ ಮತ್ತೊಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಭೂ ದಾಖಲೆಗಳ ನಿರ್ವಹಣೆಯಲ್ಲಿ ಬಳಸಲಾಗುತ್ತಿರುವ ಮೋಜಿಣಿ ತಂತ್ರಾಂಶ ಅನ್ವಯದ ಪರಿಣಾಮಕಾರಿತ್ವವನ್ನು ಪರಿಶೀಲಿಸುವುದಕ್ಕಾಗಿ ಕೈಗೆತ್ತಿಕೊಳ್ಳಲಾಯಿತು.

## 1.8 ಲೆಕ್ಕಪರಿಶೋಧನೆಯ ಫಲಿತಾಂಶಗಳು

**ಪ್ರಸಕ್ತ ಸಾಲಿನಲ್ಲಿ ನಡೆಸಲಾದ ಸ್ಥಳೀಯ ಲೆಕ್ಕಪರಿಶೋಧನೆಯ ಸ್ಥಿತಿಗತಿ**

ಮಾರಾಟಗಳ ಮೇಲಿನ ತೆರಿಗೆ/ಮೌಲ್ಯ ವರ್ಧಿತ ತೆರಿಗೆ, ರಾಜ್ಯ ಅಬಕಾರಿ, ಮೋಟಾರು ವಾಹನಗಳು, ಸರಕುಗಳು ಮತ್ತು ಪ್ರಯಾಣಿಕರು, ಮತ್ತಿತರ ಇಲಾಖಾ ಕಚೇರಿಗಳ 439 ಘಟಕಗಳ 2013–14 ಸಾಲಿನಲ್ಲಿ ಮಾಡಲಾದ ದಾಖಲೆಗಳ ಪರೀಕ್ಷಾ ಪರಿಶೀಲನೆಯು 1,425 ಪ್ರಕರಣಗಳಲ್ಲಿ ₹ 380.22 ಕೋಟಿ ಒಟ್ಟಾರೆ ಮೊತ್ತದ ರಾಜಸ್ವವನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿದ್ದುದು/ಕಡಿಮೆ ಪ್ರಮಾಣದಲ್ಲಿ ವಿಧಿಸಿದ್ದುದು/ನಷ್ಟ ಸಂಭವಿಸಿದ್ದುದನ್ನು ತೋರಿಸಿಕೊಟ್ಟಿತು. 2013-14 ವರ್ಷದಲ್ಲಿ, ಸಂಬಂಧಪಟ್ಟ ಇಲಾಖೆಗಳು ₹ 69.64ಕೋಟಿ ಮೊತ್ತವು ಒಳಗೊಂಡ 210 ಕರನಿರ್ಧಾರಣೆಯನ್ನು ಕಡಿಮೆ ಪ್ರಮಾಣದಲ್ಲಿ ಮಾಡಿದ್ದುದು ಮತ್ತಿತರ ನ್ಯೂನತೆಗಳನ್ನು ಒಪ್ಪಿಕೊಂಡವು. 2013–14ರಲ್ಲಿ ಇಲಾಖೆಗಳು 586 ಪ್ರಕರಣಗಳಲ್ಲಿ ₹ 23.47 ಕೋಟಿ ಮೊತ್ತವನ್ನು ವಸೂಲಾತಿ ಮಾಡಿದವು.

## 1.9 ಈ ವರದಿಯ ವ್ಯಾಪ್ತಿ

ಈ ವರದಿಯು, ಕಾಮಗಾರಿಗಳ ಗುತ್ತಿಗೆ ಸ್ವೀಕೃತಿಗಳ ಮೇಲೆ ಮೌವತೆ ಮತ್ತು ಪ್ರವೇಶ ತೆರಿಗೆಯ ನಿರ್ಧಾರಣೆ, ವಿಧಿಸುವಿಕೆ ಮತ್ತು ವಸೂಲಾತಿ ಹಾಗೂ ಮೋಜಿಣಿಗೆ ಸಂಬಂಧಿಸಿದಂತೆ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಮೇಲೆ ₹ 184.18 ಕೋಟಿ ಮೊತ್ತದ ಹಣಕಾಸಿನ ಪ್ರಭಾವವನ್ನು ಒಳಗೊಂಡಿರುವ ಎರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯೂ ಒಳಗೊಂಡಂತೆ 26 ಕಂಡಿಕೆಗಳನ್ನು ಒಳಗೊಂಡಿದೆ (ಮೇಲೆ ತಿಳಿಸಲಾದ ಸ್ಥಳೀಯ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಪತ್ತೆಹಚ್ಚಲಾದ ಹಾಗೂ ಹಿಂದಿನ ಸಾಲುಗಳಲ್ಲಿ ಲೆಕ್ಕಪರಿಶೋಧನೆಯು

ಪತ್ತೆಹಚ್ಚಿದ, ಆದರೆ ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲು ಸಾಧ್ಯವಾಗದ ಅಂಶಗಳಿಂದ ಆಯ್ಕೆ ಮಾಡಲಾಗಿರುವ).

ಇಲಾಖೆಗಳು/ಸರ್ಕಾರವು ₹ 6.95 ಕೋಟಿ ಮೊತ್ತವು ಒಳಗೊಂಡಂತೆ ಲೆಕ್ಕಪರಿಶೋಧನೆಯ ಅಭಿಪ್ರಾಯಗಳನ್ನು ಒಪ್ಪಿಕೊಂಡವು ಹಾಗೂ ಅದರ ಪೈಕಿ ₹ 1.68 ಕೋಟಿ ಮೊತ್ತವನ್ನು ವಸೂಲಾತಿ ಮಾಡಿದವು. ಉಳಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರಗಳು ಸ್ವೀಕೃತಗೊಂಡಿರುವುದಿಲ್ಲ (ಅಕ್ಟೋಬರ್ 2014). ಇವುಗಳನ್ನು ಮುಂದಿನ II ರಿಂದ Vರವರೆಗಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.